**ಪತಿ** ಸತ್ತು ಕೆಲ ದಿನಗಳಾಗಿದ್ದವು. ಒಂದು ದಿನ ಸತ್ತವನ ಹೆಂಡತಿ, 'ಮಾರುತಿ ಕಾರನ್ನು ಕೇವಲ ಇನ್ನೂರಾ ಐವತ್ತು ರೂಪಾಯಿಗೆ ಮಾರುತ್ತೇನೆ' ಎಂದು ಪತ್ರಿಕೆಯಲ್ಲಿ ಜಾಹೀರಾತು ಕೊಟ್ಟಳು. ಜಾಹೀರಾತು ಓದಿ ಅವಳ ಗೆಳತಿಯರಿಗೆ ತುಂಬಾ ಆಶ್ಚರ್ಯವಾಯಿತು. ಕಡೆಗೆ ಆಕೆಯ ಆಪ್ತ ಗೆಳತಿ ರಮ್ಯಾ, 'ಮಧು, ನೀನು ಆ ಕಾರನ್ನು ಕೇವಲ ಇನ್ನೂರಾ ಐವತ್ತು ರೂಪಾಯಿಗೆ ಮಾರುವುದಾಗಿ ಜಾಹೀರಾತು ಕೊಟ್ಟಿದ್ದೀಯಲ್ಲ, ಅದಕ್ಕೆ ಕಾರಣ ಕೇಳಬಹುದೇ' ಎಂದು ಪ್ರಶ್ನಿಸಿದಳು. ಉತ್ತರಿಸಿದ ಅವಳು, 'ಅದಕ್ಕೊಂದು ಬಲವಾದ ಕಾರಣವಿದೆ ರಮ್ಯಾ. ನನ್ನ ಪತಿ ತಮ್ಮ ವಿಲ್‌ನಲ್ಲಿ 'ಕಾರು ಮಾರಿ, ಇದರಿಂದ ಬಂದ ಹಣವನ್ನು ನನ್ನ ಸೆಕ್ರೆಟರಿ ಸವಿತಾಳಿಗೆ ಕೊಡಬೇಕು' ಎಂದು ಬರೆಯಿಸಿದ್ದಾರೆ. ಅದಕ್ಕೆ ಹೀಗೆ ಮಾಡಿದೆ' ಎಂದು ಮೂಗು ಮುರಿದಳು.

***

**ಬಟ್ಟೆ** ಅಂಗಡಿಯಲ್ಲಿ ಮಹಿಳೆಯೊಬ್ಬಳು ಸಾಕಷ್ಟು ಸೀರೆಗಳನ್ನು ನೋಡಿಯೂ ಯಾವುದನ್ನೂ ಆಯ್ಕೆ ಮಾಡಿರಲಿಲ್ಲ. ಅದರಿಂದ ಬೇಸರಗೊಂಡ ಸೀರೆ ವ್ಯಾಪಾರಿ ಅಂತಿಮವಾಗಿ ಐದು ಸೀರೆಗಳನ್ನು ಆಕೆಯ ಮುಂದೆ ಇಟ್ಟು, 'ಮೇಡಂ, ಈ ಐದೂ ಸೀರೆಗಳು ನಿಮಗೆ ತುಂಬಾ ಚೆನ್ನಾಗಿ ಮ್ಯಾಚ್ ಆಗುತ್ತವೆ ನೋಡಿ' ಎಂದು ಸಲಹೆ ನೀಡಿದ. ಅದಕ್ಕೆ ಆಕೆ, 'ನಾನು ಈ ಸೀರೆಗಳನ್ನು ಖರೀದಿಸುವೆ. ಅದಕ್ಕೂ ಮುಂಚೆ ನನ್ನದೊಂದು ಷರತ್ತಿದೆ. ಅದಕ್ಕೆ ಒಪ್ಪಿದರೆ ಖರೀದಿಸುವೆ' ಎಂದಳು. ಆ ಷರತ್ತಿನ ಬಗ್ಗೆ ವ್ಯಾಪಾರಿ ಕೇಳಿದ್ದಕ್ಕೆ ಆಕೆ, 'ನಾನು ಈ ಸೀರೆಗಳನ್ನು ಖರೀದಿಸಿ ಮನೆಗೆ ತೆಗೆದುಕೊಂಡು ಹೋದ ಬಳಿಕ ನಮ್ಮ ಯಜಮಾನರು ನಾಳೆ ಬೆಳಿಗ್ಗೆ ನಾಲ್ಕು ಸೀರೆಗಳನ್ನು ವಾಪಸ್ ಕೊಡಲು ಬರ್ತಾರೆ. ಆಗ ನೀವು, 'ಒಮ್ಮೆ ಖರೀದಿಸಿದ ಸೀರೆಗಳನ್ನು ಯಾವುದೇ ಕಾರಣಕ್ಕೂ ವಾಪಸ್ ತೆಗೆದುಕೊಳ್ಳುವುದಿಲ್ಲ' ಎಂದು ಹೇಳಿ ವಾಪಸ್ ಕಳಿಸಬೇಕು' ಎಂದಳು!

***

**ರಷ್ಯಾದ** ವಿಮಾನ ನಿಲ್ದಾಣದಲ್ಲಿ ಒಂದು ಯಂತ್ರವನ್ನಿಡಲಾಗಿತ್ತು. ಆ ಯಂತ್ರದೊಳಗೆ ನಾಣ್ಯವನ್ನು ಹಾಕಿದಾಗ ಅದು ಪ್ರಸ್ತುತ ಸಂದರ್ಭದ ಬಗ್ಗೆ ಹೇಳುತ್ತಿತ್ತು. ಒಬ್ಬ ಭಾರತೀಯ ಯಂತ್ರದೊಳಗೆ ನಾಣ್ಯ ಹಾಕಿದ. ಯಂತ್ರ, 'ನೀವು ಫ್ಲೈಟ್ ನಂಬರ್ 333ರಿಂದ ಅಮೆರಿಕ ಮಾರ್ಗದಿಂದ ಮುಂಬೈಗೆ ಹೋಗ್ತಿದ್ದೀರ' ಹೇಳಿತು. ಭಾರತದ ಪ್ರಯಾಣಿಕನಿಗೆ ಕುತೂಹಲ ಮೂಡಿತು. ಅವನು ಮೂರು ಬಾರಿ ನಾಣ್ಯ ಹಾಕಿದಾಗಲೂ ಅದೇ ಉತ್ತರ ಬಂತು. ಕಡೆಗೆ ಅವನು ನಾಲ್ಕನೇ ಬಾರಿಗೆ ನಾಣ್ಯ ಹಾಕಿದಾಗ ಯಂತ್ರದಿಂದ ಬಂದ ಉತ್ತರ ಹೀಗಿತ್ತು; ನಿಮ್ಮ ಫ್ಲೈಟ್ ನಿಲ್ದಾಣ ಬಿಟ್ಟು ಹೋಗಿದೆ!

***

ಆ ಹಳ್ಳಿಯ ಹೊರಗೆ ಒಂದು ಶಾಲೆಯಿತ್ತು. ಆ ಮಾರ್ಗವಾಗಿ ಅನೇಕ ವಾಹನಗಳು ಸಂಚರಿಸುತ್ತಿದ್ದವು. ಊರ ಪ್ರಮುಖರು ಶಾಲೆಯ ಹೊರಭಾಗದ ರಸ್ತೆಯ ಅಂಚಿನಲ್ಲಿ ಒಂದು ಬೋರ್ಡನ್ನು ಬರೆಸಿ ಹಾಕಿಸಿದರು. ಬೋರ್ಡ್‌ನಲ್ಲಿ ಹೀಗೆ ಬರೆಯಲಾಗಿತ್ತು; 'ಎಚ್ಚರಿಕೆಯಿರಲಿ. ಸಮೀಪದಲ್ಲಿ ಶಾಲೆಯಿದೆ. ವಾಹನಗಳನ್ನು ವೇಗವಾಗಿ ಓಡಿಸಬೇಡಿ. ಮಕ್ಕಳ ಜೀವವನ್ನು ರಕ್ಷಿಸಿ'. ಒಂದು ದಿನ ವಿದ್ಯಾರ್ಥಿಯೊಬ್ಬ ಆ ಎಚ್ಚರಿಕೆಯ ಅಡಿಯಲ್ಲಿ ತನ್ನ ವಾಕ್ಯವನ್ನು ಹೀಗೆ ಸೇರಿಸಿದ; 'ಆದರೆ ಉಪಾಧ್ಯಾಯರ ಜೀವವನ್ನು ರಕ್ಷಿಸಬೇಡಿ'!

***

ಮೈದಾನವೊಂದರ ಪಕ್ಕದಲ್ಲಿ ಮೆಡಿಕಲ್ ಶಾಪ್ ಇತ್ತು. ಒಂದಿನ ಮೆಡಿಕಲ್ ಶಾಪ್‌ನ ಮಾಲೀಕರು ಸಂಜೆ ಮನೆಗೆ ಹೊರಡುವಾಗ ತಮ್ಮ ಸೇಲ್ಸ್‌ಮನ್ ಅನ್ನು ಕರೆದು, 'ಅಲ್ಲ, ನಿನ್ನೆ ನಮ್ಮ ಶಾಪ್‌ನಿಂದ ತಲೆನೋವಿನ ಮಾತ್ರೆಗಳು ಜಾಸ್ತಿ ಮಾರಾಟವಾದವಲ್ಲ, ಅದಕ್ಕೆ ಕಾರಣವೇನಿರಬಹುದು' ಎಂದು ಪ್ರಶ್ನಿಸಿದರು. ಅದಕ್ಕೆ ಸೇಲ್ಸ್‌ಮನ್, 'ಸರ್, ಪಕ್ಕದ ಮೈದಾನದಲ್ಲಿ ಸಮಧುರ ಸಂಗೀತ ಕಾರ್ಯಕ್ರಮವಿತ್ತು. ಅದನ್ನು ಕೇಳಿಯೇ ಅಷ್ಟೊಂದು ಮಾತ್ರೆಗಳು ಮಾರಾಟವಾದವು' ಎಂದು ವ್ಯಂಗ್ಯ ನಗುಬೀರಿದ!

***

ಕ್ರಿಪ್ಟೋ ಕರೆನ್ಸಿ ಬ್ಯಾನ್ ಸಾಧ್ಯತೆ: ರಿಸರ್ವ್ ಬ್ಯಾಂಕ್



ಇಲ್ಲಾಂದ್ರೆ ಹಣದ ಮೌಲ್ಯ ಮತ್ತೆ ನಾಣ್ಯಗಳಾಗಲಿವೆ!

ಒಂದು ಮನೆಯಲ್ಲಿ ಮಗುವೊಂದು ಸದಾ ಅಳುತ್ತಿತ್ತು. ಆ ಮನೆಯ ಅಕ್ಕ ಪಕ್ಕದವರು ಮಗುವಿನ ರೋದನೆ ಕೇಳಿಕೇಳಿ ಬೇಸತ್ತಿದ್ದರು. ಕಡೆಗೆ ಒಂದು ದಿನ ಯಾರೋ ಬಂದು ಮಗುವಿನ ತಾಯಿಯನ್ನು, 'ಮಗು ಅಳುವಾಗ ನೀವೇಕೆ ಜೋಗುಳ ಹಾಡುವುದಿಲ್ಲ' ಎಂದು ಪ್ರಶ್ನಿಸಿದರು. ಅದಕ್ಕೆ ಅವಳು, 'ನಾನು ಜೋಗುಳ ಹಾಡಿದಾಗಲೆಲ್ಲ ಅಕ್ಕಪಕ್ಕದ ಮನೆಯವರು ಬಂದು, ನಿಮ್ಮ ಮಗು ಅಳುವುದೇ ಚೆಂದ ಅನ್ನುತ್ತಿದ್ದರು' ಎಂದಳು.

***

ಆಗತಾನೇ ಮದುವೆಯಾಗಿದ್ದ ಜೋಡಿ ಉದ್ಯಾನವನದಲ್ಲಿ ವಾಯುವಿಹಾರ ಮಾಡುತ್ತಿತ್ತು. ಅಕಸ್ಮಾತ್ ನಾಯಿಯೊಂದು ಅವರೆಡೆಗೆ ಬೊಗಳುತ್ತಾ ಬಂತು. ತಕ್ಷಣ ಗಂಡ ಹೆಂಡತಿಯನ್ನು ಮಡಿಲಿನಲ್ಲಿ ಎತ್ತಿಕೊಂಡ. ನಾಯಿ ಕಡಿದರೆ ತನಗೇ ಕಡಿಯಲಿ ಎಂಬುದು ಅವನ ಉದ್ದೇಶವಾಗಿತ್ತು. ನಾಯಿ ಅವನ ಅತಿ ಸಮೀಪಕ್ಕೆ ಬಂದು ಸ್ವಲ್ಪ ಬೊಗಳಿ, ನಂತರ ತನ್ನ ಪಾಡಿಗೆ ತಾನು ಹೊರಟು ಹೋಯಿತು. ಗಂಡ ನೆಮ್ಮದಿಯಿಂದ ಉಸಿರಾಡುತ್ತಾ ಹೆಂಡತಿಯನ್ನು ಕೆಳಗಿಳಿಸಿ ಅವಳನ್ನು ಮತ್ತೂ ಪ್ರೀತಿಯಿಂದ ನೋಡಿದ.

ಆದರೆ ಹೆಂಡತಿ ಅವನನ್ನು ತರಾಟೆಗೆ ತೆಗೆದುಕೊಂಡು ಕಿರುಚಿದಳು, 'ನಾಯಿಯನ್ನು ಓಡಿಸಲು ಕಲ್ಲು ಅಥವಾ ಕೋಲು ತೆಗೆದುಕೊಳ್ಳುವುದನ್ನು ನಾನು ಇದುವರೆಗೂ ನೋಡಿದ್ದೇನೆ. ಆದರೆ ನಾಯಿಯನ್ನು ಓಡಿಸಲು ತನ್ನ ಹೆಂಡತಿಯನ್ನು ಎಸೆಯುವ ಮನುಷ್ಯನನ್ನು ನಾನು ನೋಡಿದ್ದು ಇದೇ ಮೊದಲು'!

ವಸ್ತುಪ್ರದರ್ಶನದಲ್ಲಿ ಜನರು ಕಿಕ್ಕಿರಿದು ಕಲೆತಿದ್ದರು. ಓರ್ವ ಮಹಾನುಭಾವರು ಸುಂದರಿಯೊಬ್ಬಳ ಬಳಿಗೆ ಬಂದು ಪ್ರಾರ್ಥಿಸಿದರು

ಮಹಾನುಭಾವ: ನನಗೆ ನಿಮ್ಮಿಂದ ಒಂದು ಸಹಾಯ ಬೇಕಿತ್ತು.

ಸುಂದರಿ: ಹೇಳಿ.

ಮಹಾನುಭಾವ: ನಾನು ನಿಮ್ಮ ಹತ್ರ ಸ್ವಲ್ಪ ಹೊತ್ತು ಮಾತನಾಡಬಹುದೇ?

ಸುಂದರಿ: (ಆಶ್ಚರ್ಯದಿಂದ) ಏಕೆ?

ಮಹಾನುಭಾವ: 'ನೋಡಿ, ನನ್ನ ಹೆಂಡ್ತಿಯನ್ನು ತುಂಬಾ ಹೊತ್ತಿನಿಂದ ಹುಡುಕ್ತಿದ್ದೇನೆ. ಎಲ್ಲೂ ಕಾಣ್ತಿಲ್ಲ. ನಾನು ನಿಮ್ಮ ಹತ್ರ ಮಾತನಾಡುವುದನ್ನು ನೋಡಿದರೆ ಅವಳು ಎಲ್ಲಿದ್ದರೂ ಬಾಣದಂತೆ ಓಡಿ ಬರ್ತಾಳೆ, ಅದಕ್ಕೇ!

ಸಂಗ್ರಹ: (ಹಿಂದಿಯಿಂದ ಕನ್ನಡಕ್ಕೆ)
ಡಿ.ಎನ್. ಶ್ರೀನಾಥ್, ಶಿವಮೊಗ್ಗ